ವಿದ್ಯಾ ಎಸ್ ಪೈ, ಹೊನ್ನಾವರ
*ಮದುವೆಗೆ ಸಪ್ತಪದಿ ತುಳಿಯಬೇಕು; ಡೈವೋರ್ಸ್‌ಗೆ?*



ಕೋರ್ಟ್‌ನ ಪಡಿ!

ಡಿ.ಎಸ್.ಪಂಕಜಸುಬ್ರಮಣ್ಯಂ, ಬೆಂಗಳೂರು
*ಹಿಂದೆ ಮನೆಗೆ ಬಂದ ಅತಿಥಿಗಳಿಗೆ ಸದಾ ಬಾಗಿಲು ತೆರೆದಿರುತ್ತಿತ್ತು. ಇಂದು ಅತಿಥಿಗಳನ್ನು ನೋಡಿದರೆ ಠಪ್ ಎಂದು ಬಾಗಿಲು ಮುಚ್ಚುವರು. ಇದರರ್ಥ?*
ಆಗಿನ ಕಾಲದಲ್ಲಿ ಬಂದವರಿಂದಲೇ ವಿಚಾರಗಳ ಸೀರಿಯಲ್ ಪಡೆಯುವುದಿತ್ತು. ಈಗ ಅವರು ಬಂದರೆ ಸೀರಿಯಲ್‌ಗೆ ಭಂಗ ಬರುವುದಲ್ಲ!

ಕೀರಿಕ್ಕಾಡು ವನಮಾಲ ಕೇಶವಭಟ್ಟ, ದೇಲಂಪಾಡಿ
*ಹೊಸಪಕ್ಷಗಳನ್ನು ರಚಿಸಿದುದು ಉಪಯೋಗವಿಲ್ಲವೆಂದು ಕಂಡುಬಂದರೂ ಹೊಸ ಪಕ್ಷಗಳು ಉದಯಿಸುತ್ತಿವೆಯಲ್ಲಾ?*
ವಿಚ್ಛೇದನಗಳು ಇದ್ದರೂ ಕಲ್ಯಾಣಮಂಟಪಗಳು ಹೌಸ್ ಫುಲ್ ಆಗಿಲ್ಲವೇ, ಇದೂ ಹಾಗೇ!

ಪಿ.ಎಸ್.ಶ್ರೀವತ್ಸ, ಬೆಂಗಳೂರು
*ಬೆಂಗಳೂರಿನಲ್ಲಿ ಇಷ್ಟೊಂದು ಕೊಲೆಗಳಾಗುತ್ತಿದ್ದರೂ ಇನ್ನೂ ಜನರಿಗೆ ಬುದ್ಧಿ ಬರದಿರಲು ಕಾರಣ?*



ಪಾಪ, ಅವರಿಗೆ ಬುದ್ಧಿ ಬಂದ್ ಆಗಿದೆ ಎಂದು ಹೇಳಿದುದನ್ನು ಬುದ್ಧಿ ಬಂದಾಗಿದೆ ಎಂದು ತಿಳಿದಿದ್ದಾರಂತೆ.

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
*ವಯಸ್ಸಿಗೆ ಬಂದ ಹುಡುಗನಿಗೆ ಮೀಸೆ ಬರುತ್ತೆ, ವಯಸ್ಸಿಗೆ ಬಂದ ಹುಡುಗಿಗೆ?*
ಮೀಸೆ ಬಂದ ಹುಡುಗರ ಸಾಲು ಸಾಲೇ ಬರುತ್ತೆ!

ಗಾಯತ್ರಿ, ರಾಜಾಜಿನಗರ
*ಕುಂತ ಕಡೆ ಧನಲಾಭ ಅಂತಾರಲ್ಲಾ, ಕುಂತಕಡೆ ಧನ ಬರುವಂತಿದ್ದರೆ...?*
ಅವನನ್ನು ಮಂತ್ರಿ ಅಥವಾ ಉಟ್ಟು ಓರಾಟಗಾರ ಎನ್ನುತ್ತಾರೆ!

ಕೆ.ಮೈಥಿಲಿಕೃಷ್ಣ, ಬೆಂಗಳೂರು
*ದೇವರ ಸನಿಹದಲ್ಲೇ ಯಾವಾಗಲೂ ಇರುವ ಪೂಜಾರಿಗೆ ಎಂದಿಗೂ ಸ್ವರ್ಗದ ಬಾಗಿಲು ತೆರೆದೇ ಇರುತ್ತೆ ಅಂತೀರಾ?*
ಕಟ್ಟಡದ ವಾಚ್‌ಮನ್‌ಗೆ ಕೆಲಸ ಮುಗಿದ ಮರುಕ್ಷಣ ಪ್ರವೇಶ ವರ್ಜ್ಯ! ಸ್ಥಾನದ ಯೋಗ ಯೋಗ್ಯತೆ ಇದ್ದರೆ ಮಾತ್ರ ಲಭ್ಯ!

ಎಂ.ಬಿ.ಖೋದಾನಪೂರ, ಸವದತ್ತಿ
*ಬಯಸಿದ ಕನ್ಯೆಯನ್ನು ಬೇರೆಯವರು ಮದುವೆಯಾದರೆ ಏನು ಮಾಡಬೇಕು?*
ಹೋಗಿ ತಲೆಯಮೇಲೆ ಅಕ್ಕಿಕಾಳು ಹಾಕಿ ಬನ್ನಿ, ಇಲ್ಲವಾದರೆ ಅದೇ ಅಕ್ಕಿಕಾಳನ್ನು ಬಾಯಿಗೆ ಹಾಕಿಕೊಂಡು ಸುಮ್ಮನೆ ಕೂಡಿ.

ಕೆ.ಎಸ್.ನಾರಾಯಣರೆಡ್ಡಿ, ಕೆ.ಜಿ.ಎಫ್
*ಗಂಡು ಹೆಣ್ಣನ್ನು ಒಲಿಸಿಕೊಳ್ಳುವುದಕ್ಕೂ, ಹೆಣ್ಣು ಗಂಡನ್ನು ಒಲಿಸಿಕೊಳ್ಳುವುದಕ್ಕೂ ಏನು ವ್ಯತ್ಯಾಸ?*
ನಾರಿ ಒಲಿಯಲ್ಕೆ ದುಬಾರಿ, ಪತಿಯಾಗುವವಗೆ ಸಿಂಪಥಿ ತೋರ್ದರೆ ಸಾಕು!

ಎಸ್.ಎಸ್.ಮಹಾಬಲರಾವ್,ನರಸಿಂಹರಾಜಪುರ
*ನೈಟಿ ಧರಿಸಿ ಬರುವಂತಿಲ್ಲ, ಬಳೆ ತೊಡದೆ ಬರುವಂತಿಲ್ಲವೆಂದು ದೇವಸ್ಥಾನವೊಂದು ಪ್ರಕಟಣೆ ಹೊರಡಿಸಿದೆ?*
ಫ್ಯಾಶನ್ ಟಿವಿಯವರು ಹಾಗೂ ಕೋಳ ಧರಿಸಿದವರು ಈ ಪ್ರಕಟಣೆಯನ್ನು ಸ್ವಾಗತಿಸಿದರಂತೆ!

ಎಸ್.ಸಿ.ರಮೇಶ್, ಮೈಸೂರು
*ಬದುಕುವುದಕ್ಕಾಗಿ ಮೈಮಾರಿಕೊಳ್ಳುವ ವೇಶ್ಯೆಗೂ, ಅಧಿಕಾರಕ್ಕಾಗಿ ತಮ್ಮನ್ನೇ ಮಾರಿಕೊಳ್ಳುವ ಜನಪ್ರತಿನಿಧಿಗಳಿಗೂ ಏನು ವ್ಯತ್ಯಾಸ?*
ಅವರದೋ ಹಣಕ್ಕಾಗಿ ಮೈ ದಾನ, ಇವರೋ ಕುಳಿತು ದೋಚುವರು ಎಕರೆಗಟ್ಟಲೆ ಮೈದಾನ!

ಜೆ.ಸುಬ್ಬನಾಯಕ, ಚೊಮ್ಮಲಾಪುರ
*ಹೆಂಗಸರ ಬಾಯಲ್ಲಿ ಗುಟ್ಟು ನಿಲ್ಲಬಾರದೆಂದ ಧರ್ಮರಾಯ ಈ ಮೊಬೈಲ್ ಯುಗದಲ್ಲಿ ಹೇಗೆ ಶಪಿಸುತ್ತಿದ್ದ?*
ನೆಟ್ಟಗೆ ಬಂದ ಮೆಸೇಜೆಲ್ಲಾ ನೆಟ್ ಮೂಲಕ ಪ್ರಸಾರವಾಗಲಿ ಎಂದು!

## ಬಹುಮಾನಿತ ಪ್ರಶ್ನೆ

ಟಿ.ಸುಧಾ ಲಿಂಗಣ್ಣ, ರಾಯಚೂರು
*ತಂದೆ ತಾಯಿ ಎಂದರೆ ಮುಖ ಮುದುಡುತ್ತೆ; ಹೆಂಡತಿ ಎಂದರೆ ಅರಳುತ್ತೆ, ಯಾಕೆ?*
ಇನ್ನೂ ಹೊಸ ಮುಖ! ಸ್ವಲ್ಪ ದಿನ ಹೋದರೆ ಇಲ್ಲೂ ಮುದುಡುತ್ತೆ ಬಿಡಿ.

ಕುಬೇರಪ್ಪ ಎಂ ವಿಭೂತಿ, ಹರಿಹರ
*ಕಪಟ ಮನಸ್ಸಿನ ರಾಜಕೀಯ ನಾಯಕರು ಬಿಳಿ ಬಟ್ಟೆ ಹಾಕಲು ಕಾರಣವೇನು?*
ಮನುಜನ ಶವವನ್ನೇ ಬಿಳಿಯ ಬಟ್ಟೆ ಮುಚ್ಚುವಾಗ ಮನದ ವಿಷವನ್ನೂ ಅದು ಮುಚ್ಚಬಹುದೆಂಬ ಭಾವ!

ಎಂ.ಟಿ.ಸಂಪತ್‌ಕುಮಾರನ್, ಬೆಂಗಳೂರು
*ಈಗಿನ ಮಹಿಳೆಯರಾರಿಗೂ ಊರ್ಮಿಳೆಯೆಂಬ ಹೆಸರೇ ಇರುವುದಿಲ್ಲವೇಕೆ?*
ಕಟ್ಟಿಕೊಂಡವನು ಅಕಾರಣವಾಗಿ 14ವರ್ಷ ಮಾಯವಾಗುವನೆಂಬ ಭಯ!

ಶಿವರಾಜ ಕೆ ವಿಭೂತಿ, ಹರಿಹರ
*ಸಮಯಸಾಧಕ ರಾಜಕಾರಣಿಗಳು ಮೀರ್‌ಸಾಧಕನ ವಂಶದವರೆ?*
ಅಹುದು ಎಂದರೆ ಶಕುನಿ ನಮ್ಮ ಮೇಲೆ ಕೇಸ್ ಹಾಕುವನಂತೆ!

ಸಿ.ಜಿ.ಜಶಧರ್, ಬೆಂಗಳೂರು
*ನಿಮ್ಮ ಬಗ್ಗೆ ನೀವು ಒಂದೇ ಒಂದು ಪದದಲ್ಲಿ ಏನೆಂದು ಹೇಳಲು ಬಯಸುತ್ತೀರಾ?*
ಸ್ವೈರೋದ್ಭವೋದ್ಯೋಗಾಕಾಂಕ್ಷಿರ್ನಿರತಸ್ವದುದ್ಯೋಗೇ!

ಸಾವಿತ್ರಮ್ಮ ಕೆ ವಿಭೂತಿ, ಹರಿಹರ
*ಅಂದಿನ ರಾಜಕಾರಣಿಗಳು ನೇತಾರರು, ಇಂದಿನವರು?*



ಬೇತಾಳರು!

■ ರಾಮ್